ಕಾಲದಲ್ಲಿ ಸರ್ಕಾರ ಅದ್ಯತೆ ಮೇಲೆ ಕಾರ್ಖಾನೆ ಮಾಲೀಕರ ಕಿವಿ ಹಿಂಡಿ ನೀವೇ ನಿಗದಿ ಮಾಡಿದ್ದೀರಿ, ಆ ಬೆಲೆಗೆ ಅವನು ಕೊಂಡು ಕೊಳ್ಳುವ ಹಾಗೆ ಮಾಡಿ, ಅವನು ಬಗ್ಗುವ ಹಾಗೆ ಮಾಡಿ, ಅವನಿಗೆ ಚಾಟಿ ಏಟು ಕೊಟ್ಟು ಅವರಿಗೆ ಬೇಕಾದರೆ ಸವಲತ್ತು ಮಾಡಿ ಕೊಟ್ಟು, ಈ ಗೊಬ್ಬರದ ಬೆಲೆ ಹೆಚ್ಚು ಆಗುವುದಕ್ಕೆ ಸಾಧ್ಯವಿಲ್ಲವೆಂದು, ಅವನು ಈ ಗೊಬ್ಬರವನ್ನು ನಿಮ್ಮ ಬೆಲೆಗೆ ಮಾರುವುದಕ್ಕೆ ವ್ಯವಸ್ಥೆ ಮಾಡಿ, ಸಬ್ಸಿಡಿ ಉಪಯೋಗ ಮಾಡಿಕೊಳ್ಳುವುದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಹೀಗಾಗಿ ಕಳೆದ ಒಂದು ತಿಂಗಳಿನಿಂದ ರೈತ ನಮ್ಮ ರಾಜ್ಯದ ರಸಗೊಬ್ಬರ ಯೂರಿಯಾ ಬಿಟ್ಟು, ಕಾಂಪ್ಲೆಕ್ಸ್ ಗೊಬ್ಬರವನ್ನು ಉಪಯೋಗ ಮಾಡುತ್ತಿದ್ದಾನೆ. ರಾಜ್ಯದಲ್ಲಿ ಆ ಸಬ್ಸಿಡಿ ಉಪಯೋಗ ಅಲ್ಲ. ಹಳೆಯದು ಇರಬಹುದು, ಹೊಸದು ಇರಬಹುದು ಇದು ಒಂದು ಭಾಗ. ಹಳೆಯ ಗೊಬ್ಬರವನ್ನು ಹೊಸ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಆ ವ್ಯಾಪಾರಸ್ಥರ ಮೇಲೆ ಕ್ರಮ ತೆಗೆದುಕೊಳ್ಳವುದು ಇನ್ನೊಂದು ವಿಷಯ. ಬಹಳ ಪ್ರಮುಖವಾಗಿರತಕ್ಕಂಥದ್ದು ಲಕ್ಷಾಂತರ ಜನರಿಗೆ ಅನುಕೂಲ ಆಗುವಂತಹ ಈ ಸಬ್ಸಿಡಿ ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ನೀವು ಬೇರೆ ಮಿಕ್ಸ್ ಮಾಡಿ ಎನ್ನುವುದನ್ನು ರೈತನಿಗೆ ಹೇಳುತ್ತಿದ್ದೀರಿ. ತಾವು ಏನು ಮಾಡುತ್ತಿದ್ದೀರಿ, ಅದು ಪರಿಣಾಮಕಾರಿಯಾಗಿ ರೈತನಿಗೆ ಕಡಿಮೆ ದರದಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡಿ, ಆಗ ನಾನೂ ಸ್ವಾಗತ ಮಾಡುತ್ತೇನೆ. ಆದರೆ ಈಗ ನೀವು ಇನ್ನು 24 ಗಂಟೆಯೊಳಗೆ ಆ ಕಾಂಪ್ಲೆಕ್ಸ್ ಗೊಬ್ಬರ ಯಾವ ರೈತ ಉಪಯೋಗ ಮಾಡುತ್ತಾರೆ, ನೀವು ಕಾರ್ಖಾನೆ ಮಾಲೀಕರ ಜೊತೆ ನೀವು ಆ ಬೆಲೆ ನಿಗದಿ ಮಾಡಿ ಸಬ್ಸಿಡಿ ಸಿಗುವ ಹಾಗೆ ಮಾಡಿ. ★★ ಯಾವಾಗ ಬಂತು, ಅದರಿಂದ ಪರಿಸ್ಥಿತಿ ಹೀಗಾಗಿದೆ. ಇವತ್ತಿನ ದಿವಸ ಈ ಕಂಟ್ರೋಲ್ ತೆಗೆದ ಮೇಲೆ ಆಯಾ ರಾಜ್ಯಗಳಲ್ಲಿ ★★ ಇದರ ಬಗ್ಗೆ ನಮ್ಮ ವಿರೋಧ ಇದೆ. ಕರ್ನಾಟಕ ರಾಜ್ಯದಲ್ಲಿ ನೀವು ಕಡಿಮೆ ಮಾಡಿದರೆ ನಿಮಗೆ ಸ್ವಾಗತ ಮಾಡುತ್ತೇನೆ ನಿಮಗೆ ವಾಟಾಳ್ ನಾಗರಾಜ್‌ರವರು ಏನು ಅಭಿನಂದನೆ ಸಲ್ಲಿಸಿದ್ದಾರೆ, ಹಾಗೆಯೇ ನಾವು ಅಭಿನಂದನೆ ಸಲ್ಲಿಸುತ್ತೇವೆ. 24 ಗಂಟೆಯಲ್ಲಿ ಈ ಕಾಂಪ್ಲೆಕ್ಸ್ ಮತ್ತು ಇತರೆ ಗೊಬ್ಬರವನ್ನೂ ಕೇಂದ್ರ ಸರ್ಕಾರದ ಸಬ್ಸಿಡಿ ಪಡೆದು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದೆ ಹೋದರೆ ಈ ಸರ್ಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲ. ಯಾವುದೋ ಒಳ ವ್ಯವಹಾರ ಮಾಡಿಕೊಂಡು ರೈತರಿಗೆ ದ್ರೋಹ ಮಾಡುತ್ತಿದ್ದಾರೆಂದು ವಾಕ್ ಔಟ್ ಮಾಡುತ್ತೇನೆ. ನಾಳೆ ಬಂದು ಈ ಗೊಬ್ಬರ ವಿತರಣೆ ಮಾಡುವ ವ್ಯವಸ್ಥೆ ನೀವು ಮಾಡದೇ ಇದ್ದರೆ, ಮತ್ತೆ ನಾವು ಇಲ್ಲಿ ಬಂದು ನಮ್ಮ ಮುಂದಿನ ಕಾರ್ಯಕ್ರಮ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ಒಂದು ನಿಮಿಷ ಕುಳಿತುಕೊಳ್ಳಿ.

(ಈ ಸಂದರ್ಭದಲ್ಲಿ ಬಿ.ಜೆ.ಪಿ.ಯ ಎಲ್ಲಾ ಸದಸ್ಯರು ವಾಕೌಟ್ ಮಾಡಿದರು)

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೇ ದಯವಿಟ್ಟು ನನಗೆ ಅವಕಾಶ

★★ Expunged as ordered by the chair.